ಸಿ.ಸಿ. ನಂ. *434/2016*

ಪಿ.ಡಬ್ಲು-*5*

ಸಾಕ್ಷಿಯನ್ನು ಇಂದು ದಿನಾಂಕಃ *05.08.2024* ರಂದು ಪುನಃ ಕರೆಯಿಸಿ ಪ್ರಮಾಣಿಕರಿಸಲಾಯಿತು.

**ಪಾಟೀ ಸವಾಲು ಆರೋಪಿತರ ಪರ ಶ್ರೀ ಬಿ.ಎ.ಡಿ. ವಕೀಲರಿಂದ**

ಸ.ನಂ. ೬೩ ಕ್ಕೆ ಸಂಬಂಧಿಸಿದಂತೆ ಆರೋಪಿತರು ಮತ್ತು ನಮ್ಮ ನಡುವೆ ದಾವೆ ಇತ್ತು ಎಂದರೆ ಸರಿ. ಅದರ ಸಂಖ್ಯೆ. ೧೦೧/೨೦೧೦ ಎಂದರೆ ಸರಿ. ಆರೋಪಿ ನಂ.೧ ನಮ್ಮ ಮೇಲೆ ಓ.ಎಸ್. ೧೪೫/೨೦೧೦ ನ್ನು ದಾಖಲಿಸಿದ್ದಳು ಎಂದರೆ ಸರಿ. ಸದರಿ ಓ.ಎಸ್.ನಂ. ೧೦೧/೨೦೧೦ ಭಾಗಶಃ ಡಿಕ್ರಿಯಾಗಿರುತ್ತದೆ. ಮತ್ತು ೧೪೫/೨೦೧೦ ಡಿಕ್ರಿ ಆಗಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಆದೇಶದ ವಿರುದ್ದ ನಾವು ಮೇಲ್ಮನವಿ ಸಲ್ಲಿಸಿರುತ್ತೇವೆ ಎಂದರೆ ಸರಿ. ಸದರಿ ಮೇಲ್ಮನವಿಯು ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ. ಪೋಲಿಸರು ನನ್ನನ್ನು ವಿಚಾರಣೆ ಮಾಡಿ ಈ

ಪ್ರಕರಣದ ಬಗ್ಗೆ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ನಾನು ನನ್ನ ಹೇಳಿಕೆಯಲ್ಲಿ ದಿ.೧೮.೧೦.೨೦೧೫ ರಂದು ದೇವಂತಗಿ ಗ್ರಾಮದಲ್ಲಿ ಇರುವ ಜಮೀನು ಆರೋಪಿ ನಂ.೧ ರವರ ಹೆಸರಿನಲ್ಲಿ ಇರುತ್ತದೆ, ಸದ್ಯ ಆರೋಪಿ ನಂ.೧ ಸಾಗುವಳಿ ಮಾಡುತ್ತಿದ್ದಾಳೆ, ದಿ.೧೬.೧೦.೨೦೧೫ ರಂದು ಆರೋಪಿ ನಂ.೧ ಅವಳ ಸಂಗಡ ಆರೋಪಿ ನಂ.೨ ರಿಂದ ೯ ರವರನ್ನು ಕರೆದುಕೊಂಡು ಬಂದಿದ್ದರು ಎಂದು ಪೋಲಿಸರಿಗೆ ಹೇಳಿಕೆ ನೀಡಿದ್ದೀರಾ ಎಂಧರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ಹೇಳಿಕೆಯಲ್ಲಿ ಅಂದಾಜು ೧೧.೩೦ ಗಂಟೆ ಸುಮಾರಿಗೆ ನಾನು ನನ್ನ ತಾಯಿ ಮತ್ತು ಗ್ರಾಮಸ್ಥರಾದ ತುಕಾರಾಮ ಪ್ರಕಾಶ ಇವರೆಲ್ಲರೂ ಹೊಲಕ್ಕೆ ಹೋಗಿ ಆರೋಪಿ ನಂ.೧ ರವರಿಗೆ ನಿಮ್ಮ ಹಣ ಬಡ್ಡಿ ಸಮೇತ ಕೊಡುತ್ತೀವಿ ನಮ್ಮ ಹೊಲ ಬಿಟ್ಟುಕೊಡಿ ಎಂದು ಹೇಳಿರುತ್ತೇವೆ ಎಂದು ಹೇಳಿಕೆಯಲ್ಲಿ ಹೇಳಿರುತ್ತೇನೆ.

ಆರೋಪಿ ನಂ.೫ ಮತ್ತು ೬ ರವರು ನನಗೆ ಪರಿಚಯ ಇರುವುದಿಲ್ಲ. ಆರೋಪಿತರು ಮತ್ತು ನಮ್ಮ ನಡುವೆ ಹಣಕಾಸಿವ ವ್ಯವಹಾರ ನಡೆದಿತ್ತು, ಆ ಕಾರಣಕ್ಕಾಗಿ ಘಟನೆ ನಡೆದಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಆರೋಪಿ ನಂ.೧ ಚಾಸಾ-೪ ರವರ ಸೀರೆ ಹಿಡಿದು ಎಳೆದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಆರೋಪಿ ನಂ.೧ ರವರು ಎಲ್ಲಾ ಆರೋಪಿತರಿಗೆ ಬಿಡಬೇಡಿರಿ ಎಂದು ಪ್ರಚೋದನೆ ಕೊಡುತ್ತಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಆರೋಪಿತರು ಮತ್ತು ನಮ್ಮ ನಡುವೆ ಸಿವಿಲ್ ಸ್ವರೂಪದ ದಾವೆ ನಡೆದ ಕಾರಣ ಅವರ ಮೇಲೆ ಒತ್ತಡ ಹೇರಬೇಕೆನ್ನುವ ಕಾರಣಕ್ಕಾಗಿ ಚಾಸಾ-೧ ರವರು ಖೊಟ್ಟಿ ಫಿರ್ಯಾದಿಯನ್ನು ಸಲ್ಲಿಸಿರುತ್ತಾರೆ, ಅದಕ್ಕೆ ಪೂರಕವಾಗಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ನಾವು ಆರೋಪಿತರ ಬಳಿಯಿಂದ ಹಣವನ್ನು ಬಡ್ಡಿಗಾಗಿ ಪಡೆದುಕೊಂಡಿದ್ದೆವು, ಅದರ ಜಾಮೀನಿಗಾಗಿ ಮುದ್ದತ್ತ ರಜಿಸ್ಟರ್ ಮಾಡಿಕೊಟ್ಟಿರುತ್ತೇನೆ, ನಾನು ಜಮೀನಿನಲ್ಲಿದ್ದಾಗ ಆರೊಪಿತರು ನಮ್ಮ ಜಮೀನಿಗೆ ಟ್ರಾಕ್ಟರ್ ತೆಗೆದುಕೊಂಡು ಬಂದು ಹೊಡಪೆಟ್ಟು ಮಾಡಿರುತ್ತಾರೆ, ನಾನು ಇವತ್ತಿನವರೆಗಾದರೂ ಹಣ ಮರಳಿ ಆರೋಪಿತರಿಗೆ ನೀಡಲು ತಯಾರಿದ್ದೇನೆ, ಆದರೆ ಆರೊಪಿತರು ತೆಗೆದುಕೊಳ್ಳಲು ತಯಾರಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ.

ಜಮೀನು ಸ.ನಂ. ೬೩, ಕ್ಷೇತ್ರ ೫ ಎ-೩೭ ಗುಂಟೆ ಜಮೀನನ್ನು ಆರೋಪಿತರಿಂದ ೫,೭೫,೦೦೦-೦೦ ಗಳನ್ನು ಪಡೆದುಕೊಂಡು ಮೂರು ವರ್ಷಗಳಿಗಾಗಿ ಮುದ್ದತ್ತ ರಜಿಸ್ಟರ್ ಮಾಡಿಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಆರೋಪಿ ನಂ.೧ ರವರಿಗೆ ಸದರಿ ಹಣ ಮರಳಿ ಕೊಡಲು ಹೋದಾಗ ಅವಳು ತೆಗೆದುಕೊಳ್ಳದೇ ನಾನು ಹಣ ನಿಮಗೆ ಮರಳಿ ತೆಗೆದುಕೊಳ್ಳುವುದಕ್ಕೆ ಕೊಟ್ಟಿರುವುದಿಲ್ಲ, ಜಮೀನು ಖರೀದಿ ಮಾಡಿರುವುದಕ್ಕೆ ಕೊಟ್ಟಿರುತ್ತೇನೆ ಎಂದು ಹೇಳಿರುತ್ತಾಳೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಜಮೀನು ಈಗ

ಆರೋಪಿತರ ಕಬ್ಜಾ ವಹಿವಾಟಿಯಲ್ಲಿರುತ್ತದೆ, ದಿ.೧೭.೧೦.೨೦೧೫ ರಂದು ೧೧.೩೦ ಸುಮಾರಿಗೆ ಆರೋಪಿತರು ಜಮೀನನ್ನು ಸಾಗುವಳಿ ಮಾಡುತ್ತಿರುವಾಗ ನಮ್ಮ ತಂದೆಯವರು ಹಿರಿಯರ ಸಮಕ್ಷಮ ಕರೆದುಕೊಂಡು ಹೋಗಿ ಆರೋಪಿ ನಂ.೧ ರವರನ್ನು ನೀವು ಕೊಟ್ಟಿರುವ ಹಣವನ್ನು ಬಡ್ಡಿ ಸಮೇತ ಕೊಡುತ್ತೇವೆ, ನಮ್ಮ ಜಮೀನು ನಮಗೆ ಮರಳಿ ಕೊಡು ಎಂದು ಹೇಳಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಆಗ ಆರೋಪಿ ನಂ.೨ ಏ ರಂಡಿ ಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದು ಹೊಲದ ವ್ಯವಹಾರ ಎಲ್ಲಾ ಮುಗಿದಿದೆ ಎಂದು ಹೇಳಿ ಚಾಸಾ-೧ ರವರ ಬೆನ್ನು ಬಾಗಿಸಿ ಕೈಯಿಂದ ಹೊಡೆದನು , ಚಾಸಾ-೪ ರವರು ಬಿಡಿಸಲು ಬಂದಾಗ ಅವರ ಸೀರೆ ಸೆರಗು ಹಿಡಿದು ಎಳೆದಾಡಿ ಕೈಯಿಂದ ಬೆನ್ನ ಮೇಲೆ ಹೊಡೆದನು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಆರೊಪಿ ನಂ.೧ ಈ ಹಾಟ್ಯಾಗಳನ್ನು ಬಿಡಬೇಡಿರಿ ಎಂದು ಹೇಳಿ ಆರೋಪಿ ನಂ.೩ ರವರ ಬಳಿಯಿದ್ದ ಕುರುಪಿಯನ್ನು ತೆಗೆದುಕೊಂಡು ಚಾಸಾ-೧ ರವರ ಕಡೆಗೆ ಬೀಸಿದರು ಆಗ ಸದರಿ ಕುರುಪಿಯು ಚಾಸಾ-೬ರವರ ಕಾಲಿಗೆ ತಗುಲಿ ಬಿದ್ದಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಚಾಸಾ-೮ ರವರನ್ನು ಬಿಡಿಸಲು ಹೋದಾಗ ಆರೋಪಿ ನಂ. ೪, ೫ ರವರು ತಡೆದು ನಿಲ್ಲಿಸಿದರು, ಆರೋಪಿ ನಂ.೭ ಚಾಸಾ-೭ ರವರಿಗೆ ರಟ್ಟೆಗೆ ಹೊಡೆದಿರುತ್ತಾರೆ, ಆರೋಪಿ ನಂ.೮ ಮತ್ತು ೯ ರವರು ನಾನು ಬಿಡಿಸಲು ಹೋದಾಗಿ ನನಗೆ ತಡೆದು ಬೆನ್ನ ಮೇಲೆ ಮತ್ತು ಕಪಾಳಕ್ಕೆ ಹೊಡೆದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಸದರಿ ಜಗಳವನ್ನು ಚಾಸಾ-೮ ರಿಂದ ೧೦ ರವರು ಬಿಡಿಸಿರುತ್ತಾರೆ, ನಂತರ ಆರೊಪಿತರೆಲ್ಲರೂ ಇನ್ನು ಮುಂದೆ ನೋಡಿಕೊಳ್ಳುತ್ತೇವೆ ಎಂದು ಚೀರಾಡುತ್ತಾ ಓಡಿ ಹೋದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ.

ಮರುವಿಚಾರಣೆ : ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂ ದ